ಆಗೇತಿ, ಪ್ರೇಯರ್‍ನ್ಯಾಗ ಇರ್ಲಿಲ್ಲ ಅಂದ್ರ ಪೀ ಮಾಸ್ತಾರ ಒದಿತಾನ, ನಡಿ ಬಡ ಬಡ' ಅಂತಂದು ದುಡು ದುಡು ಹೆಜ್ಜೆ ಹಾಕತೊಡಗಿದಳು.

ಲಚುಮಿ ದುರುಗಿಯರ ಮಾತುಗಳು ಅವನ ಸಪಾಟು ತಲಿಯೊಳಗ ಹೋಗ್ಲಿಲ್ಲ ಅಂದ್ರೂ ಭರ್ಮ್ಯ ಸಾಲಿಕಡೆ ಹೋಗ್ತಾ ದೇವರ ಗುಡಿಯನ್ನೂ ಅದರೊಳಗಿನ ಗಂಟಿಯನ್ನೂ ತಿರುತಿರುಗಿ ನೋಡುತ್ತಲೇ ಇದ್ದ. 'ನಮ್ ಮಂದಿ ಆ ಗುಡ್ಯಾಕ ಹೋಗಬಾರ್ದು' ಎನ್ನುವ ಲಚುಮಿಯ ಮಾತಿನ ತಳಬುಡ ಒಂದೂ ಅರ್ಥವಾಗ್ಲಿಲ್ಲ. ಊರಿನ ಹುಡುಗರು ಮೇಲಕ್ಕೆ ಜಿಗಿದು ಎತ್ತರದಲ್ಲಿದ್ದ ಗಂಟೆಯನ್ನು ಬಾರಿಸಿ ಗರ್ಭಗುಡಿಯೊಳಗಿನ ದೇವರಿಗೆ ಸಾ ಮಾಡಿ ಬರುತ್ತಿದ್ದದ್ದು ಭರ್ಮ್ಯನಿಗೆ ಒಂಥರಾ ಭಾರಿ ಮಜಾ ಅನಿಸಾಕತ್ತಿತು. ಆದ್ರ ಗುಡಿ ಮುಂದಿನ ಕಟ್ಟಿ ಮ್ಯಾಲ ಯಾವಾಗ್ಲೂ ಮಲಗೆ ಇರ್ತಿದ್ದ ನಿಂಗಪ್ಪಜ್ಜಗ ಈ ಊರಿನ ಹುಡುಗರ ಗಂಟಿ ಹೊಡೆಯೋ ಶಬ್ದ ಒಮ್ಮೊಮ್ಮೆ ತನ್ನ ಏಕಾಂತಕ್ಕೂ ನಿದ್ದೆಗೂ ಭಂಗ ಆದಂತನಿಸಿ ಅವರನ್ನು ಬಯ್ದು ಅಲ್ಲಿಂದ ಓಡಿಸಿಬಿಡ್ತಿದ್ದ. ಈ ಹುಡುಗ್ರೋ ಮಹಾ ಉಡಾಳ್ರು. ಕೆಲವು ಸಲ ಬೇಕಂತಾನೆ ನಿಂಗಪ್ಪಜ್ಜಗ ಕಾಡಿಸಾಕ ಜೋರಾಗಿ ಗಂಟಿ ಹೊಡ್ದು ಓಡೋಗಿಬಿಡ್ತಿದ್ರು. ಇದ್ರಿಂದ ನಿಂಗಪ್ಪಜ್ಜನ ಸಿಟ್ಟು ನೆತ್ತಿಗೇರಿ ಬಾಯ್ತುಂಬ ಬಯ್ದುಬಿಡ್ತಿದ್ದ. ಒಮ್ಮೊಮ್ಮೆ ನಿಂಗಪ್ಪಜ್ಜಗ ಅಸಹನೆ ಹೆಚ್ಚಾಗಿ ಸಾಲಿತನಕ ಬಂದು ಬಸಪ್ಪ ಮಾಸ್ತಾರರಿಗೆ ದೂರು ಕೊಟ್ಟದ್ದು ಐತಿ. ಆಗ ಬಸಪ್ಪ ಮಾಸ್ತಾರ ಮಕ್ಕಳನ್ನು ಬೈದಂಗ ಮಾಡಿ ನಿಂಗಪ್ಪಜ್ಜನನ್ನು ಸಮಾಧಾನ ಮಾಡಿ ಕಳುಹಿಸುತ್ತಿದ್ದರು.

'ಢಣ್' ಎನ್ನುವ ಗಂಟೆಯ ಶಬ್ದದ ವಿಚಿತ್ರ ಗುಂಗು ಭರ್ಮ್ಯನ ನರನಾಡಿಗಳಲ್ಲೆಲ್ಲ ಪ್ರವಹಿಸಿ ಅದು ಇನ್ನಿಲ್ಲದಂತೆ ಅವನನ್ನು ಕಾಡತೊಡಗಿರುವಾಗಲೇ ಮತ್ತೊಂದು ವಿಚಾರ ಅವನಿಗೆ ಗಂಟುಬಿತ್ತು. ಒಮ್ಮೆ ಸಾಲಿಯಿಂದ ಮರಳಿ ಮನಿಗೆ ಹೋಗುತ್ತಿರಬೇಕಾದ್ರ ಯಾವುದೋ ತಿನ್ನುವ ವಸ್ತುವಿನ ವಾಸನಿ ಘಮ್ಮಂತ ಇವನ ಮೂಗಿನ ಹೊಳ್ಳಿಗಳೊಳಗ ಸೇರ್‍ಕೊಂಡು ಮೆದುಳನ್ನು ಹೊಕ್ಕಿಬಿಟ್ಟಿತು. ಈ ವಾಸ್ನಿ ಕೋಳಿ ಸಾರಿಂದೋ ಮೀನಿಂದೋ ಅಲ್ಲ ಅನ್ನುವುದು ಅವನಿಗೆ ಗೊತ್ತಾತು. ಹೋಟೆಲಿನಲ್ಲಿ ದಿನಾಲೂ ಮಾಡುವ ಮಿರ್ಚಿಬಜಿ, ಮಂಡಾಳ ವಗ್ಗಾಣಿದೂ ವಾಸ್ನಿ ಅಲ್ಲ ಅಂತ ಅವನ ಮೂಗು ಖಾತ್ರಿ ಪಡಿಸಿಕೊಂಡಿತು. ಈ ವಾಸ್ನಿ ಹೊಸಾದೇ ಇರಬೇಕನಿಸಿ ಅದರ ಜಾಡು ಹಿಡಿದು ಹೋದವನಿಗೆ ರಾಜಸ್ಥಾನಿ ಹುಡುಗನೊಬ್ಬ ತನ್ನೂರಾಗ ಗೋಬಿ ಮಂಚೂರಿಯ ಅಂಗಡಿಯೊಂದನ್ನ ತೆರೆದಿದ್ದು ಕಂಡು ಬಿಟ್ಟಿತು. ಕೆಲವು ದಿನಗಳ ಹಿಂದ ಊರಾಗ ನಡೆದಿದ್ದ ಜಾತ್ರ್ಯಾಗ ಇದೇ ರಾಜಸ್ಥಾನಿ ಹುಡುಗ ಮಾಡುತ್ತಿದ್ದ ಗೋಬಿಯನ್ನು ಮೊದಲ ಬಾರಿ ಕಂಡಿದ್ದ ಭರ್ಮ್ಯ ಅದರ ರುಚಿಯನ್ನ ಸವಿದೇಬಿಡುವ ಅವನ ಎಲ್ಲಾ ಪ್ರಯತ್ನಗಳೂ ಅಂದು ವಿಫಲವಾಗಿದ್ದವು. ಅದಕ್ಕ ಮಾದೇವಿ ರೊಕ್ಕ ಕೊಡದೆ ಇದ್ದದ್ದು ಮುಖ್ಯ ಕಾರಣವಾಗಿತ್ತು. ಜಾತ್ರ್ಯಾಗ ವ್ಯಾಪಾರ ಚೆನ್ನಾಗಿ ಆಗಿದ್ದರಿಂದಲೋ ಏನೋ ಇದ ಊರಿನ್ಯಾಗ ಪರಮನೆಂಟ್ ಅಂಗಡಿ ಹಾಕುವ ನಿರ್ಧಾರಕ್ಕ ರಾಜಸ್ಥಾನಿಯವ ಬಂದಂಗಿತ್ತು. ತನ್ನ ಅಂಗಡಿಗಾಗಿ ಅವನು ಆಯ್ಕೆ ಮಾಡಿಕೊಂಡ ಜಾಗ ಬಸ್‌ಸ್ಟ್ಯಾಂಡಿನ ಪಕ್ಕವೇ ಇದ್ದ ಸಿದ್ದನ ಚಹಾದಂಗಡಿ. ಮೊದಲಿಗೆ ಸಿದ್ದ ತನ್ನ ಅಂಗಡಿ ಪಕ್ಕವೆ ಗೋಬಿ ಅಂಗಡಿ ತೆರೆದ್ರ ತನ್ನ ವ್ಯಾಪಾರಕ್ಕೆ ಕುತ್ತು ಬರಬಹುದೆಂದೆನಿಸಿ ನಿರಾಕರಿಸಿದನಾದರೂ ತನ್ನ ಹೆಂಡತಿ ಗಿರಿಜಾಳಿಗೆ ಗೋಬಿಯೆಂದರೆ ಬಲು ಪ್ರಿಯವಾದ್ದರಿಂದಲೂ ಹೆಂಡತಿಯನ್ನು ಎದುರು ಹಾಕಿಕೊಳ್ಳುವ ಧೈರ್ಯ ಇಲ್ಲದ್ದರಿಂದಲೂ ಅವಳ ಒತ್ತಾಯಕ್ಕೆ ಮಣಿದು ಸುಮ್ಮನಿರಬೇಕಾತು.

ಈಗ ಭರ್ಮ್ಯನಿಗೆ ಸಾಲಿಗೆ ಹೋಗುವಾಗ ಬರುವಾಗ ಬರಿ ಗೋಬಿಯದೆ ಚಿಂತಿ ಶುರುವಾತು. ತನ್ನೂರಿನಲ್ಲಿ ಸಿಗುತ್ತಿದ್ದ ತಿನ್ನುವ ಎಲ್ಲಾ ಪದಾರ್ಥಗಳ ರುಚಿ ಕಂಡಿದ್ದವನು ಗೋಬಿ ಮಂಚೂರಿ ಮಾತ್ರ ನಾಲಿಗೆಗೆ ಸಿಗದೆ ಕನಸಲ್ಲಿ ಬಂದು ಕಾಡತೊಡಗಿತ್ತು. ಅದರ ಜೊತೆಗೆ ಸಾಲಿ ದಾರ್‍ಯಾಗ ಎದುರುಗೊಳ್ಳುತ್ತಿದ್ದ ಹನುಮಂತ ದೇವರ ಗುಡಿಯ ಗಂಟೆಯೂ ಇವನ ತಲಿಯೊಳಗ ಢಣಗುಡಿಸತೊಡಗಿ ಇನ್ನಿಲ್ಲದಂತೆ ಕಾಡತೊಡಗಿದ್ದವು.

* * *

ಇತ್ತ ಮುಂಜಾನಿಯ ಚುರುಕು ಬಿಸಿಲಿಗೆ ಹೆದರದ ಭರ್ಮ್ಯ, ಮಾದೇವಿ ನೀರು ತರಲು ಕೂಗಿದರೂ ಕ್ಯಾರೆ ಎನ್ನದೇ ಅಂಗಳದಾಗ ಕುಂತ್ಕಂಡು ದಿನಾಲೂ ಮಾಡುವಂಗ ಮಣ್ಣಿನ ಸಣ್ಣ ಸಣ್ಣ ಉಂಡಿಗಳನ್ನು ಮಾಡಿ ಬಾಜೂ ಮನಿಯ ತನ್ನ ಖಾಸ ದೋಸ್ತ ದ್ಯಾಮ ಇನ್ನೂ ಬರಲಾರದಕ್ಕ ಅವನನ್ನು ಕೂಗಿದ. ಭರ್ಮ್ಯನ